ಹರ್ಯಾಣ ಮಾಜಿ ಸಿಎಂ ಹೂಡಾ ಭೂ ಹಗರಣ ತನಿಖೆಗೆ ಸುಪ್ರೀಂ ಆದೇಶ 10
ಎಸ್‌ಬಿಐ ಉಳಿತಾಯ ಖಾತೆ ಕನಿಷ್ಠ ಮೊತ್ತದ ದಂಡ ಇಳಿಕೆ 10
ಲಿಂಗಾಯತ ಧರ್ಮ: ಇಂದಿನ ಸಂಪುಟ ಸಭೆಯಲ್ಲಿ ತೀರ್ಮಾನ 5
2025ರ ವೇಳೆಗೆ ಭಾರತ ಕ್ಷಯ ರೋಗ ಮುಕ್ತ 9

ಮಂಗಳೂರು
ಬುಧವಾರ
14 ಮಾರ್ಚ್ 2018
ಹೇಮಲಂಬಿ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಶ್ರವಣ
ಬೆಲೆ ₹ 5.00

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಸಂಪುಟ 39, ಸಂಚಿಕೆ 347, ಪುಟಗಳು 12+4+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2018-20 Posted at kodial

## ಪೋರ್ಟಬಿಲಿಟಿ ವ್ಯವಸ್ಥೆ ಜಾರಿ: ಖಾದರ್


ದಿಗಂತ ಚಿತ್ರ

**ಶಿವಮೊಗ್ಗ:** ರಾಜ್ಯದ ಯಾವುದೇ ನ್ಯಾಯ ಬೆಲೆ ಅಂಗಡಿಯಲ್ಲಿ ಪಡಿತರ ಪಡೆಯಲು ಸಾಧ್ಯವಾಗುವಂತೆ ಪಡಿತರ ಅಂಗಡಿ ಪೋರ್ಟಬಿಲಿಟಿ ವ್ಯವಸ್ಥೆಯನ್ನು ಜಾರಿಗೊಳಿಸ ಲಾಗಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಯು.ಟಿ.ಖಾದರ್ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ನಿಗದಿತ ಪಡಿತರ ಅಂಗಡಿಯಲ್ಲೇ ಪಡಿತರ ಧಾನ್ಯ ಪಡೆಯಬೇಕೆಂಬ ನಿಯಮವನ್ನು ಸಡಿಲಿಸಲಾಗಿದೆ. ತಮಗೆ ಅನುಕೂಲವಾದ ಪಡಿತರ ಅಂಗಡಿಗೆ ಪಡಿತರ ಕಾರ್ಡ್ ವರ್ಗಾಯಿಸಲು ಸಾಧ್ಯವಾಗುವಂತೆ ಪೋರ್ಟಬಿಲಿಟಿ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಇದು ದೇಶದಲ್ಲೇ ಪ್ರಥಮವಾಗಿದೆ. ಇದರಿಂದ ಉತ್ತಮ ಸೇವೆ ನೀಡುವ ಪಡಿತರ ಅಂಗಡಿಗಳನ್ನು ಆಯ್ಕೆ ಮಾಡಿಕೊಳ್ಳಲು ಗ್ರಾಹಕರಿಗೆ ಅವಕಾಶವಾಗಲಿದೆ. ಪಡಿತರ ಅಂಗಡಿಗಳ ಮಧ್ಯೆಯೇ ಉತ್ತಮ ಸ್ಪರ್ಧೆಗೂ ಇದು ಕಾರಣವಾಗಲಿದೆ. ಗ್ರಾಹಕರ ಹೆಚ್ಚಳದಿಂದಾಗಿ ಬೇಕಾಗುವ ಪಡಿತರ ಧಾನ್ಯಗಳನ್ನು ಹೆಚ್ಚುವರಿಯಾಗಿ ವಿತರಿಸಲು ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

**ಮಾಹಿತಿ ನೀಡಿದವರಿಗೆ ಬಹುಮಾನ:** ಕೆಲವರು ಅರ್ಹತೆ ಹೊಂದಿಲ್ಲದೇ ಇದ್ದರೂ ಬಿಪಿಎಲ್ ಕಾರ್ಡ್ ಪಡೆದಿರುವ ಬಗ್ಗೆ ಮಾಹಿತಿ ನೀಡಿದರೆ ಮಾಹಿತಿದಾರರಿಗೆ ಪ್ರತಿ ಮಾಹಿತಿಗೆ 400ರೂ. ನಗದು ಬಹುಮಾನ ನೀಡಲಾಗುವುದು. ಮಾಹಿತಿ ನೀಡುವವರ ವಿವರವನ್ನು ಸಂಪೂರ್ಣ ಗೌಪ್ಯವಾಗಿರಿಸಲಾಗುವುದು. ಇದಕ್ಕಾಗಿ ಸಾಫ್ಟ್ ವೇರ್ ಸಿದ್ಧಪಡಿಸಲಾಗುತ್ತಿದೆ. ಇದೇ ರೀತಿ ಕಾಳಸಂತೆಯಲ್ಲಿ ಪಡಿತರ ಧಾನ್ಯ ಮಾರಾಟ ಅಥವಾ ಅಕ್ರಮ ದಾಸ್ತಾನು ಕುರಿತು ಮಾಹಿತಿ ನೀಡಿದರೆ ಅಂತವರಿಗೆ ಒಟ್ಟು ದಾಸ್ತಾನಿನ ಶೇ.20ರಷ್ಟು ಪಾಲನ್ನು ನೀಡಲಾಗುವುದು. ಪಡಿತರ ಅಕ್ರಮ ತಡೆಯಲು ಜನರ ಸಹಭಾಗಿತ್ವ ಮುಖ್ಯ ಎಂದರು.

**ತಕ್ಷಣ ಪಡಿತರ ವಿತರಣೆ:** ಪಡಿತರ ಚೀಟಿ ಪಡೆದು ಬಯೋಮೆಟ್ರಿಕ್ ವಿವರಗಳನ್ನು ದಾಖಲಿಸಿದ ತಕ್ಷಣ ಪಡಿತರ ಧಾನ್ಯವನ್ನು ವಿತರಿಸಲು ಈಗಾಗಲೇ ಸೂಚನೆ ನೀಡಲಾಗಿದೆ. ಬಯೋಮೆಟ್ರಿಕ್ ಜಾರಿ ಬಳಿಕ ಬಹುತೇಕ ಸೋರಿಕೆಯನ್ನು ತಡೆಯಲಾಗಿದೆ. ಆಧಾರ್ ಜೋಡಣೆಯಿಂದಾಗಿ 11 ಲಕ್ಷ ಬೋಗಸ್ ಕಾರ್ಡ್‌ಗಳನ್ನು ರದ್ದುಪಡಿಸಲು ಸಾಧ್ಯವಾಗಿದೆ ಎಂದರು.